**ಸಾಕ್ಷಿಯನ್ನು ದಿನಾಂಕ: 09-06-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು :- 3 ನೇ ಪ್ರತಿವಾದಿ ಪರ ವಕೀಲರಿಂದಃ**

ನನಗೆ ನಿವೇಶನ ಬೇಕೆಂದು ಈ ದಾವೆಯನ್ನು ಸಲ್ಲಿಸಿದ್ದೇನೆ. ಅದು ಅರ್ಧ ಅರ್ಧ ಗುಂಟೆ ಎಂದು ಎರಡು ನಿವೇಶನ ಇರುತ್ತದೆ. ಹಳೆ ಸರ್ವೆ ನಂ.41/2 ಹೊಸ ಸರ್ವೆ ನಂ.41/17 ಮತ್ತು 41/18 ಇರುತ್ತದೆ. ಪ್ರತಿ ಅಡಿಗೆ ರೂ.520/- ರಂತೆ ವ್ಯಾಪಾರ ಆಗಿರುತ್ತದೆ. ಸದರಿ ನಿವೇಶನದ ವ್ಯಾಪಾರ ಮುಕ್ತಿಯಾರ ರವರ ಮನೆಯ ಬಳಿ ಆಗಿರುತ್ತದೆ. ಮುಕ್ತಿಯಾರ ರವರ ಹೆಸರಿಗೆ ಜಿ.ಪಿ.ಎ ಇದ್ದ ಕಾರಣ ನಾನು ಅವರಿಂದ ವ್ಯಾಪಾರ ಮಾಡಿದ್ದೆ. ನಾನು ರೈತ ಆಗಿರುತ್ತೇನೆ. ನಾನು ವಿಜಯಪುರ ನ್ಯಾಯಾಲಯದ ಒಂದು ದಾವೆ, ದೇವನಹಳ್ಳಿಯ ಕಿರಿಯ ವಿಭಾಗದಲ್ಲಿ ಎಂದು ದಾವೆ ಮತ್ತು ಶಿಡ್ಲಘಟ್ಟದಲ್ಲಿ ಒಂದು ದಾವೆ ಸಲ್ಲಿಸಿರುತ್ತೇನೆ. ನಾನು ರಿಯಲ್ ಎಸ್ಟೇಟ್ ವ್ಯಾಪಾರ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ವ್ಯಾಪಾರ ಮಾಡುತ್ತೇನೆ ಎಂದು ಹೇಳಿ ಸರಿಯಾಗಿ ಹಣ ನೀಡದೇ ಅವರಿಂದ ಕರಾರು ಪಡದೆದುಕೊಂಡು ಸುಳ್ಳು ದಾವೆಗಳನ್ನು ಹಾಕುವ ಹವ್ಯಾಸಗಳನ್ನು ಹೊಂದಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕಃ 27-11-2017 ರಂದು ನಾನು ವಿಜಯಪುರ ಪೋಲಿಸ್ ಠಾಣೆಯಲ್ಲಿ 1 ರಿಂದ 3 ನೇ ಪ್ರತಿವಾದಿಗಳ ವಿರುದ್ಧ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದೂರಿನ ಮೇರೆಗೆ ಪೋಲಿಸರು ಕರೆಸಿ ರಾಜೀ ಮಾಡಿ ರೂ.3 ಲಕ್ಷ ನನಗೆ ವಾಪಸ್ಸು ನೀಡಬೇಕೆಂದು ತಿರ್ಮಾನವಾಗಿರುತ್ತದೆ, ಅದರಂತೆ ನನಗೆ ರೂ.2 ಲಕ್ಷ ಚೆಕ್ ಮತ್ತು ರೂ.1 ಲಕ್ಷ ನಗದು 1 ರಿಂದ 3 ಪ್ರತಿವಾದಿಗಳು ನೀಡಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಮಾಲೀಕರಿಲ್ಲದಿದ್ದರೂ ಸಹ ಅವರಿಂದ ಅಕ್ರಮವಾಗಿ ಕರಾರು ಪತ್ರವನ್ನು ಪಡೆದು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ದಾವಾ ಸ್ವತ್ತಿನ ಖಾತೆ ಆಗಿರಲಿಲ್ಲ ಎಂದರೆ ಸರಿ. ಪ್ರತಿವಾದಿಗಳು ಅವರ ಕಷ್ಟಕ್ಕೆ ದಾವಾ ಸ್ವತ್ತನ್ನು ಮಾರಿರುವ ವಿಚಾರ ಗೊತ್ತಿದ್ದರೂ ಸಹ ನಾನು ಅವರಿಗೆ ನಿಗದಿ ಸಮಯದಲ್ಲಿ ಬಾಕಿ ಹಣವನ್ನು ನೀಡದೇ ಅವರಿಗೆ ತೊಂದರೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ರಾಜೀ ತಿರ್ಮಾನದಂತೆ ನಾನು ಹಣ ವಾಪಸ್ಸು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಪರಿಹಾರ ಪಡೆದುಕೊಳ್ಳಲು ಯೋಗ್ಯನಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**